3) ಸಚಿವರಿಂದ ಹೇಳಿಕೆ

ಉಲ್ಲಾಳ ಕ್ಷೇತ್ರದಲ್ಲಿ ಮನೆ ನಿವೇಶನ ಹೊಂದಿರುವವರಿಗೆ ಹಕ್ಕುಪತ್ರ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೇ, ನಿನ್ನೆ ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆ ಬಂದಾಗ, ಆ ಪ್ರಶ್ನೆ ಮಾನ್ಯ ಕೆ. ಜಯರಾಮಶೆಟ್ಟರದ್ದು. ಅವರು ಶೂನ್ಯ ವೇಳೆಯಲ್ಲಿ ಮಂಗಳೂರು ತಾಲ್ಲೂಕು ಉಲ್ಲಾಳ ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ಮನೆ ನಿವೇಶನ ಇಲ್ಲದವರು ಹಾಗೂ ಮನೆ ನಿವೇಶನ ಹೊಂದಿದವರು ಜೀವಾರು ವರ್ಷಗಳು ಕಳೆದರೂ ಹಕ್ಕು ಪತ್ರ ನೀಡದೇ ಇರುವ ಬಗ್ಗೆ ಇನ್ನೂ ಬಹಳಷ್ಟು ಜನರಿಗೆ ಪಡಿತರ ಚೀಟಿ ನೀಡದಿರುವ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಲು ಅನುವು ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ ಎಂದು ಅವರು ಕೇಳಿಕೊಂಡಿದ್ದಾರೆ. ಅಂದರೆ ಉಲ್ಲಾಳ ಕ್ಷೇತ್ರದಲ್ಲಿ ಇನ್ನೂ ಕೂಡ ಕೆಲವರಿಗೆ ಪಡಿತರ ಚೀಟಿಯನ್ನು ಕೊಟ್ಟಿಲ್ಲ ಎಂದು ನೋಟೀಸ್ ತಮಗೆ ಕೊಟ್ಟಿದ್ದಾರೆ. ತಾವು ನಿನ್ನೆಯ ದಿನ ಈ ವಿಷಯ ಬಂದಾಗ, ಏಕೆಂದರೆ ಇದಕ್ಕೆ ನಾನು ಸ್ಪಷ್ಟೀಕರಣ ನೀಡಬೇಕಾಗಿದೆ. ಕಂದಾಯ ಮಂತ್ರಿಗಳು ಇಲ್ಲ, ಅವರು ನನ್ನ ಪರ್ಮಿಷನ್ ಕೇಳಿಲ್ಲ. ಬಹಳ ನೋವಾಗುತ್ತಿದೆ ಎಂದು ಅದೂ ಇದೂ....

ಅಧ್ಯಕ್ಷರು :— ಪ್ರೊಸೀಡಿಂಗ್ಸ್ ತರಿಸಿ ಓದಿದ್ದೀರಾ? ಪೂರ್ತಿಯಾಗಿ.

ಶ್ರೀ ಬಿ. ಸೋಮಶೇಖರ್ :— ಪೇಪರ್‌ನಲ್ಲಿ ಎಲ್ಲಾ ಬಂದಿದೆ.

ಅಧ್ಯಕ್ಷರು :— ಎಲ್ಲಾ ಪ್ರೊಸೀಡಿಂಗ್ಸ್ ತರಿಸಿ ಓದಿದ್ದೀರಾ?

ಶ್ರೀ ಬಿ. ಸೋಮಶೇಖರ್ :— ಪೇಪರ್‌ನಲ್ಲಿ ಬಂದಿರತಕ್ಕಂಥಾದ್ದು...

ಅಧ್ಯಕ್ಷರು :— ದಯಮಾಡಿ ಕೇಳಿ, ಈ ಸದನದಲ್ಲಿ ನಡೆಯತಕ್ಕಂಥಾ ಕಲಾಪಕ್ಕೆ ಆಧಾರ ಇಲ್ಲಿನ ಪ್ರೊಸೀಂಡಿಂಗ್ಸ್ ನ್ಯೂಸ್ ಪೇಪರ್ಸ್ ಅಲ್ಲ. ನಾನು ಫಸ್ಟ್ ಕೇಳಿದೆ, ಯಾರಪ್ಪ ಪೂಡ್ ಮಿನಿಸ್ಟರ್ ಹೇಳುತ್ತಾರಾ ಅವರು ಹೇಳುತ್ತಾರಾ ಅಂತ, ರೆವಿನ್ಯೂ ಮಿನಿಸ್ಟರ್ ಹೇಳುತ್ತಾರೆ ಎಂದು ನಿಮ್ಮ ಟ್ರಜರಿ ಬೆಂಚ್‌ನವರೇ ಹೇಳಿದರು.

ಶ್ರೀ ಬಿ. ಸೋಮಶೇಖರ್ :— ನೋಟಿಸ್ ಪೂಡ್ ಮಿನಿಸ್ಟರ್‌ಗೆ ಹೋಗಿದೆ ನಿನ್ನೆ. ಪೂಡ್ ಮಿನಿಸ್ಟರ್‌ಗೆ ಹೋಗಿದ್ದರಿಂದ ನನ್ನ ಸಬ್ಜೆಕ್ಟ್ ಅಲ್ಲ.

MR. SPEAKER: From the Chair I have made it very very clear. ಯಾರು ರೆವಿನ್ಯೂ ಮಿನಿಸ್ಟರೋ ಅಥವಾ ಪೂಡ್ ಮಿನಿಸ್ಟರೋ ಎಂದು ಕೇಳಿ, ನಿಮ್ಮ ಟ್ರಜರಿ ಬೆಂಚ್‌ನವರು ಹೇಳಿದ ಮೇಲೆ ಎಲ್ಲಿ ಹಾಗಾದರೆ ರೆವಿನ್ಯೂ ಮಿನಿಸ್ಟರ್ ಎಲ್ಲಿ ಎಂದು ಕೇಳಿದೆ.

ಶ್ರೀ ಬಿ. ಸೋಮಶೇಖರ್ :— ಪತ್ರಿಕೆಯಲ್ಲಿ ಕಂದಾಯ ಮಂತ್ರಿಗಳನ್ನು ಅಧ್ಯಕ್ಷರು ತರಾಟೆಗೆ ತೆಗೆದುಕೊಂಡರು ಎಂದರು ನನ್ನ ಮೇಲೆ ಬಂದಿರುವುದರಿಂದ...

ಅಧ್ಯಕ್ಷರು :— ನಾನು ಯಾರನ್ನೂ ತರಾಟೆಗೆ ತೆಗೆದುಕೊಳ್ಳುವಂತಿಲ್ಲ ನನಗೆ ನೀವು ತೆಗೆದುಕೊಳ್ಳದಿದ್ದರೆ ಸಾಕು.

ಶ್ರೀ ಬಿ. ಸೋಮಶೇಖರ್ :— ತಪ್ಪು ಯಾರಿಗೆ ಆದರೂ ಕೂಡ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಏಕೆಂದರೆ ಸಾರ್ವಜನಿಕರಲ್ಲಿ ಏನು ಭಾವನೆ ಬಂದಿದೆ ಅಂದರೆ..

ಅಧ್ಯಕ್ಷರು :— ಏನು ಸ್ಪಷ್ಟೀಕರಣ ಕೊಡಬೇಕು ಹೇಳಿ. ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಅಲ್ಲಾ ಸೋಮಶೇಖರ್ ಅವರು ಏನೋ ತಪ್ಪು ಮಾಡಿ ಕಾನೂನು ಉಲ್ಲಂಘನೆ ಮಾಡಿದ್ದಾರೆ ಅವರನ್ನು ಅದಕ್ಕೆ ತರಾಟೆಗೆ ತೆಗೆದುಕೊಂಡಿದ್ದಾರೆ ಅಂತ ಹೇಳಿ ಬರಬಾರದು. ಏಕೆಂದರೆ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ ಎಂದು ಹಳ್ಳಿಕಡೆ ಹೇಳುತ್ತಾರೆ. ದಯವಿಟ್ಟು ಅದು ಆಗಬಾರದು. ತಮಗೆ ಅವಮಾನ ಮಾಡಬೇಕು ಎಂದು ಇಲ್ಲ. ಏಕೆಂದರೆ ಏನಾದರೂ ನನಗೆ ನೋಟಿಸು ಬಂದು ಆ ಸಂದರ್ಭದಲ್ಲಿ ನಾನು ಇಲ್ಲದೇ ಇದ್ದರೆ ಆ ತಪ್ಪನ್ನು ನಾನು ಹೊತ್ತುಕೊಳ್ಳುತ್ತೇನೆ. ಆ ನೋಟಿಸು ನನಗೆ ಬಂದಿಲ್ಲ ಬೇರೆ ಮಂತ್ರಿಗಳಿಗೆ ಹೋಗಿದೆ. ಆ ದಿನ ನಾನು ಇಲ್ಲ ಎಂದು ಹೇಳಿ ಪತ್ರಿಕೆಗಳಲ್ಲಿ ಬಂದಿದೆ. ತಮಗೆ ಅವಮಾನ ಆದರೆ ನಾನು ತಪ್ಪು ಮಾಡಿದಾಗ ಕ್ಷಮೆ ಕೇಳುತ್ತೇನೆ. ನನಗೆ ಅವಮಾನವಾದಾಗ ನನ್ನ ರಕ್ಷಣೆಯನ್ನು ನಾನು ಯಾರಲ್ಲಿ ಕೇಳಬೇಕು ಅಧ್ಯಕ್ಷರೇ? ಅದು ನನಗೆ ನೋವಾಗಿರತಕ್ಕಂಥದ್ದು. ನನಗೆ ನೋಟಿಸು ಬಂದು ನಾನು ಇಲ್ಲಿ ಇಲ್ಲದೇ ಇದ್ದರೆ ಅಥವಾ ನಿಮ್ಮ ಪರ್ಮಿಷನ್ ಕೇಳದೆ ಹೋಗಿದ್ದರೆ ಅದು ತಪ್ಪು. ಆದರೆ ನನಗೆ ನೋಟಿಸ್ ಬಂದಿಲ್ಲ. ಆ ನೋಟಿಸ್ ಬಂದಾಗ ಮುಖ್ಯ ಸಚೇತಕರು ಆಹಾರ ಮತ್ತು ನಾಗರೀಕ ಮಂತ್ರಿಗಳು ಎಂದು ಮಾರ್ಕ್ ಮಾಡಿದ್ದಾರೆ. ಅಲ್ಲಿ ಹೋಗಿದೆ ಇವತ್ತು ಬೆಳಿಗ್ಗೆ ನಾವು ತರಿಸಿಕೊಂಡು ನಿನ್ನೆ ಪತ್ರಿಕೆಗಳಲ್ಲಿ ಬಂದಿದ್ದರಿಂದ ಇವತ್ತು ನಾನು ಉತ್ತರ ಹೇಳೋಣ ಎಂದು ಬಂದಿದ್ದೇನೆ.

ಅಧ್ಯಕ್ಷರು :— ನೀವು ಈಗ ಕೊಟ್ಟಿರತಕ್ಕಂಥ ವಿವರಣೆ ಸಮಂಜಸವಾಗಿದೆ. ನಾನು ಸ್ಪಷ್ಟೀಕರಣ ಇಲ್ಲಿ ಕೇಳಿದಾಗ ರೆವಿನ್ಯೂ ಮಂತ್ರಿಗಳು ಉತ್ತರ ಕೊಡುತ್ತಾರಾ ಅಥವಾ ಆಹಾರ ಮಂತ್ರಿಗಳು ಉತ್ತರ ಕೊಡುತ್ತಾರಾ ಎಂದು ಕೇಳಿದಾಗ ರೆವಿನ್ಯೂ ಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದಾಗ ಆ ರೀತಿ ಹೇಳಬೇಕಾಗಿ ಬಂತು. ನಿಮ್ಮ ವಿಚಾರಕ್ಕಾಗಿ ಬಂದಿರತಕ್ಕಂಥಾದ್ದು, ನಿಮಗೆ ನೋಟಿಸ್ ಬಾರದೇ ಇರತಕ್ಕಂಥಾದ್ದು, ಅವರಿಗೆ ನೋಟಿಸ್ ಹೋಗಿರತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿರಲಿಲ್ಲ. ಆದ್ದರಿಂದ ಪತ್ರಿಕೆಗಳಲ್ಲಿ ಬಂದು ಏನು ನಿಮ್ಮ ವ್ಯಕ್ತಿತ್ವಕ್ಕೆ ಒಂದು ರೀತಿಯ ಕಳಂಕ ಬಂದಿದೆ ಅದಕ್ಕೆ ನಾನೂ ಕೂಡ ನನ್ನ

ಬೇಸರವನ್ನು ವ್ಯಕ್ತಪಡಿಸುತ್ತಿದ್ದೇನೆ. ವಿಷಾದ ವ್ಯಕ್ತಪಡಿಸುತ್ತಿದ್ದೇನೆ. ತಾವು ಎನೂ ಬೇಸರಪಟ್ಟುಕೊಳ್ಳಬೇಕಾಗಿಲ್ಲ. ಪೂರ್ವಗ್ರಹಪೀಡಿತನಾಗಿ ಈ ಸ್ಥಾನದಲ್ಲಿ ಕುಳಿತು ಯಾರಿಗೂ ಕಳಂಕ ಹಚ್ಚತಕ್ಕಂಥ ಪ್ರಯತ್ನವನ್ನು ಯಾವ ಕ್ಷಣದಲ್ಲಿಯೂ ನಾನು ಮಾಡುವುದಿಲ್ಲ.

ಶ್ರೀ ಬಿ. ಸೋಮಶೇಖರ್ :— ಥ್ಯಾಂಕ್ಯೂ.

4) ಅಧ್ಯಕ್ಷರ ಅಪ್ಪಣೆ ಮೇರೆಗೆ

ಬೆಂಗಳೂರು ಜಲಮಂಡಳಿ ವಿಚಾರ (ಬೈವಾಟರ್ ಕಂಪನಿ)

+ ಶ್ರೀ ಎಚ್.ಎನ್. ನಂಜೇಗೌಡ :— ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಇರುವುದರಿಂದ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇನ್ನು ಉತ್ತರ ಕೊಟ್ಟಿಲ್ಲ. ನಾವು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಚಾರದಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಈಗ ಆ ವಿಚಾರದಲ್ಲಿ ಮೇಲ್ಮನೆಯಲ್ಲಿ ನಿಮ್ಮ ಮಂತ್ರಿಗಳು ಅದನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ ನಾನು ಯಾರಿಗೂ ನೋವಾಗುವಂತೆ ನನ್ನ ರಾಜಕೀಯ ಜೀವನದಲ್ಲಿ ಪದಗಳನ್ನು ಬಳಸಿಲ್ಲ. ನಾನು ಅಪಾದನೆ ಮಾಡಿರಬಹುದು. ಮತ್ತೊಂದು ಮಾಡಿರಬಹುದು. ನಾನು ನಾನೇ ಒಂದು ಲಕ್ಷ್ಮಣ ರೇಖೆಯನ್ನು ಹಾಕಿಕೊಂಡಿದ್ದೇನೆ. ನಾನು ಲಕ್ಷ್ಮಣರೇಖೆಯನ್ನು ಹಾಕಿಕೊಂಡಿದ್ದೇನೆ. ನಾನು ಲಕ್ಷ್ಮಣರೇಖೆಯನ್ನು ಮೀರಿ ಇವರ ಬಗ್ಗೆ ಸ್ವಲ್ಪ ಲಘು ಪದಗಳನ್ನು ಬಳಸಿದೆ. ನಿಮ್ಮ ಬಗ್ಗೆ. ಅದು ಇರಲಿ. ನನಗೆ ಹಾಗೆ ಅನಿಸಿತು. ನಾನು ಏಕೆ ಹೇಳಿದೆ ಅಂದರೆ ನೋಡಿ ಇದರಲ್ಲಿ ನನಗೆ ಅನೇಕ ವಿಚಾರಗಳು ಗೊತ್ತಿತ್ತು. ಈಗ ಉದಾಹರಣೆಗೆ ನೀವು ಖಾತೆಗಳನ್ನು ಹಂಚಿಕೆ ಮಾಡುತ್ತೀರಿ. ಅನಂತ್‌ನಾಗ್ ಅವರಿಗೂ ಏನೋ ಮಾಡಿದ್ದೀರಿ. ಈಗ ಒಂದು ಕ್ಯಾಬಿನೇಟ್ ನೋಟ್ ನಿಮ್ಮ ಕ್ಯಾಬಿನೆಟ್‌ಗೆ ಬರುತ್ತದೆ. ಡಿಸ್‌ಕಷ್ ಇನ್-ಕನ್‌ಕ್ಲೂಸೀವ್ ಆಗುತ್ತದೆ. The Cabinet was seized of the matter. ಆ ಪೇಪರನ್ನು ತರಿಸಿಕೊಂಡು ರಿವೈಜ್ಡ್ ಕ್ಯಾಬಿನೇಟ್ ನೋಟನ್ನು ನಿಮ್ಮ ಮಿನಿಸ್ಟರ್ ಮಾಡುತ್ತಾರೆ. ನಾನು ಈ ಟೆಕ್ನಿಕಾಲಿಟೀಸ್‌ನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆ ಮಾಡುವುದಕ್ಕೆ ಹೋಗಲಿಲ್ಲ ಅಂದರೆ ಇನ್ನೂ ಅನೇಕ ಇವೆ. ಪ್ರೊಸಿಜರ್ ಇರ್ರಾಗ್ಯುಲಾರಿಟೀಸ್, ಇನ್ನು ಅನೇಕ ಇವೆ. ಅವುಗಳನ್ನು ನಾನು ಅವತ್ತು ಯಾವುದನ್ನು ಹೇಳುವುದಕ್ಕೆ ಹೋಗಲಿಲ್ಲ. ಇವತ್ತೂ ಹೇಳುವುದಿಲ್ಲ. ನನಗೆ ಎನು ಇತ್ತು ಅಂದರೆ ನಿಮ್ಮ ಮೇಲೆ ಸಿಟ್ಟು ಬರಬೇಕಾದರೆ ನೀವು ಮಾಡಿ ಗುಡಿ ದೇವರಾಗಿಬಿಟ್ಟಿರಿ. ಸುಮ್ಮನೇ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಷ್ಟೆ. ಕುರಿಯೂದರೂ ಕುಯ್ಯಲಿ, ಕೋಳಿಯನ್ನಾದರೂ ಕುಯ್ಯಲಿ, ಕತ್ತೆಯನ್ನಾದರೂ ಕಡಿಯಲಿ, ದೇವಸ್ಥಾನದ ಮುಂದೆ. ದೇವರು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದು. ನೀವು ಈ ರೀತಿ ಕುಳಿತುಬಿಟ್ಟರಲ್ಲಾ, ಈ ಬೆಂಗಳೂರಿನ ಜನಕ್ಕೆ ಎಷ್ಟು ತೊಂದರೆಯಾಗುತ್ತದೆಯಲ್ಲಾ ಎಂದು ಹೇಳಿ ನನ್ನ